ಈ) ಹಾಗಿದ್ದಲ್ಲಿ ಈ ಆರ್ಡರ್ಲಿಗಳನ್ನು ಸರ್ಕಾರದವರು ವಾಪಸು ಕರೆಸಿಕೊಳ್ಳಲು ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಸಂಪೂರ್ಣವಾಗಿ ಪಾನನಿರೋಧ ಜಾರಿಗೆ ತರುವುದು

4 - ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ್ (ಯಲಹಂಕ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅಬಕಾರಿ ಇಲಾಖೆಯಿಂದ ವಿವಿಧ ರೀತಿಯ ಮದ್ಯಗಳಿಂದ ಕಳೆದ 5 ವರ್ಷಗಳಿಂದ ಸರ್ಕಾರಕ್ಕೆ ಬರುತ್ತಿರುವ ವಾರ್ಷಿಕ ಆದಾಯವೆಷ್ಟು?

ಆ) ಈ ವಾರ್ಷಿಕ ಆದಾಯವನ್ನು ಬೇರೆ ರೀತಿಯಲ್ಲಿ ಸರಿದೂಗಿಸಿ ರಾಜ್ಯದಲ್ಲಿ ಸಂಪೂರ್ಣ ಮದ್ಯಪಾನ ನಿರೋಧವನ್ನು ಆಂಧ್ರ ಪ್ರದೇಶದ ಸರಕಾರ ಜಾರಿಗೆ ತಂದ ರೀತಿಯಲ್ಲಿ 1995-96ನೇ ಸಾಲಿನಿಂದ ರಾಜ್ಯದಲ್ಲಿ ಜಾರಿಗೆ ತರಲು ಸರ್ಕಾರದವರು ಪರಿಶೀಲಿಸುವರೇ?

ಇ) ಹಾಗಿಲ್ಲದಿದ್ದಲ್ಲಿ ಇದನ್ನು ಜಾರಿಗೆ ತರಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) ವಿವಿಧ ರೀತಿಯ ಮದ್ಯಗಳಿಂದ ಕಳೆದ 5 ವರ್ಷಗಳಲ್ಲಿ ಬಂದಿರುವ ಅಬಕಾರಿ ಆದಾಯ ಈ ಕೆಳಕಂಡಂತಿದೆ.

(ಕೋಟಿ ರೂ.ಗಳಲ್ಲಿ)

ವರ್ಷ	ಸಾರಾಯಿ	ವಿವಿಧ ರೀತಿಯ ಮದ್ಯಗಳು				ಒಟ್ಟು ಆದಾಯ	ಶೇಕಡ ಹೆಚ್ಚಳ
		ಹೆಂಡ	ಐಎಂಎಲ್	ಬಿಯರ್	ಇತರೆ		
1989-90	175.20	63.26	67.11	10.53	11.47	327.57	26.5
1990-91	304.21	17.86	88.02	10.49	29.47	429.47	31.1
1991-92	405.55	1.12	80.67	13.0	79.91	510.32	18.8
1992-93	376.18	0.17	111.56	14.59	12.76	515.26	1.0
1993-94	473.11	0.29	122.88	17.19	25.60	639.07	24.0

ಆ) ಈ ಪ್ರಸ್ತಾಪವು ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ.

ಇ) ಪ್ರಶ್ನೆ 2 ಕ್ಕೆ ನೀಡಿದ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ದಲಿತರ ಮೇಲೆ ನಡೆದ ದೌರ್ಜನ್ಯದ ಬಗ್ಗೆ

219 - ಶ್ರೀ ಎಂ. ಜಯಪ್ರಕಾಶ್ ನಾರಾಯಣ (ಯಲಹಂಕ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಪರಿಶಿಷ್ಟ ಜಾತಿಪರಿಶಿಷ್ಟ ಪಂಗಡದವರ ಮೇಲೆ ದೌರ್ಜನ್ಯಗಳು ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು?

ಆ) ಈ ದೌರ್ಜನ್ಯದ ಪರಿಣಾಮವಾಗಿ ಸತ್ತವರ ಸಂಖ್ಯೆಯೆಷ್ಟು ?(ಅದರ ಪೂರ್ಣ ಪಟ್ಟಿಯನ್ನು ಓದಗಿಸುವುದು)

ಇ) ದೌರ್ಜನ್ಯಗಳನ್ನು ಪೂರ್ಣ ತಡೆಗಟ್ಟಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹಸಚಿವರು) :

ಅ) ಹೌದು. ಜಿಲ್ಲಾವಾರು ವಿವರಗಳನ್ನು ಅನುಬಂಧ-'ಅ'ನ್ನು ಲಗತ್ತಿಸಿದೆ.

ಆ) 1992-19 ಜನ

1993-21 ಜನ

1994-18 ಜನ

ಇ) ದೌರ್ಜನ್ಯಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳ ವಿವರಗಳಿರುವ ಅನುಬಂಧ 'ಅ'ನ್ನು ಲಗತ್ತಿಸಿದೆ.

ಅನುಬಂಧ -'ಅ'

1992, 1993, 1994ನೇ ಸಾಲುಗಳಲ್ಲಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳ ಜನರ ಮೇಲೆ ನಡೆದಿರುವ ದೌರ್ಜನ್ಯಗಳ ವಿವರ.

ಕ್ರಮ ಸಂಖ್ಯೆ	ಜಿಲ್ಲೆಗಳ ಹೆಸರು	ವರದಿಯಾದದ್ದು		
		1992	1993	1994
1.	ಬೆಂಗಳೂರು ನಗರ	28	45	46
2.	ಬೆಂಗಳೂರು ಜಿಲ್ಲೆ	76	67	29
3.	ಬೆಳಗಾಂ	66	108	100
4.	ಬಳ್ಳಾರಿ	26	19	19
5.	ಬೀದರ್	13	24	23
6.	ಬಿಜಾಪುರ	120	161	136
7.	ಚಿಕ್ಕಮಗಳೂರು	4	8	30
8.	ಚಿತ್ರದುರ್ಗ	91	89	109
9.	ದಕ್ಷಿಣ ಕನ್ನಡ	17	20	21
10.	ಧಾರವಾಡ	58	57	49
11.	ಗುಲ್ಬರ್ಗ	8	42	47
12.	ಹಾಸನ	7	19	46
12.	ಕೋಲಾರ	23	36	29
14.	ಕೊಡಗು	3	4	8
15.	ಕೆ.ಜಿ.ಎಫ್.	1	6	14
16.	ಮಂಡ್ಯ	14	24	33
17.	ಮೈಸೂರು ಜಿಲ್ಲೆ	40	24	50
18.	ಮೈಸೂರು ನಗರ	4	3	1

19.	ರಾಯಚೂರು	39	40	52
20.	ಶಿವಮೊಗ್ಗ	2	11	13
21.	ತುಮಕೂರು	26	49	86
22.	ಉತ್ತರ ಕನ್ನಡ	9	9	5
23.	ಎಸ್.ಪಿ. ರೈಲ್ವೇ	-	-	-
24.	ಹುಬ್ಬಳ್ಳಿ-ಧಾರವಾಡ ನಗರ	3	2	9
	ಒಟ್ಟು	678	867	955

ಅನುಬಂಧ -ಆ

ದೌರ್ಜನ್ಯಗಳ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳು ಈ ಕೆಳಕಂಡಂತಿವೆ.

1. ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ಜನರು ವಾಸಿಸುತ್ತಿರುವ ಸ್ಥಳಗಳಿಗ ಪೊಲೀಸ್ ಪೇದೆಗಳು ಹಾಗೂ ಪೊಲೀಸ್ ಅಧಿಕಾರಿಗಳು ಆಗಿಂದಾಗ್ಗೆ ಭೇಟಿ ನೀಡಿ ಜನರ ಕುಂದುಕೊರತೆ ವಿಚಾರಣೆ ಮಾಡುತ್ತಿದ್ದಾರೆ.

2. ದೌರ್ಜನ್ಯ ಪ್ರಕರಣಗಳು ನಡೆಯುತ್ತಿರುವ ವರದಿ ಬಂದ ತಕ್ಷಣ ಸ್ಥಳೀಯ ಪೊಲೀಸರು ಪೊಲೀಸ್ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಸೂಕ್ತ ಬಂದೋಬಸ್ತು ವ್ಯವಸ್ಥೆ ಮಾಡುತ್ತಿರುತ್ತಾರೆ, ದೌರ್ಜನ್ಯಕ್ಕೆ ಕಾರಣರಾದವರ ಮೇಲೆ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು, ಅಪರಾಧಿಗಳನ್ನು ಪತ್ತೆ ಮಾಡಿ ನ್ಯಾಯಾಲಯದ ಮುಂದೆ ಹಾಜಲು ಪಡಿಸುತ್ತಿದ್ದಾರೆ.

3. ಹೆಚ್ಚಿನ ರೀತಿಯ ದೌರ್ಜನ್ಯ ಪ್ರಕರಣಗಳು ನಡೆದಿರುವ ಸ್ಥಳಗಳಿಗೆ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ, ಪ್ರಕರಣಗಳ ತನಿಖೆಯನ್ನು ವ್ಯವಸ್ಥಿತ ರೀತಿಯಲ್ಲಿ ಬೇಗನೆ ನಡೆಸಲು ಸ್ಥಳೀಯ ಪೊಲೀಸರಿಗೆ ಮತ್ತು ಪೊಲೀಸ್ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ.

4. ಸರ್ಕಾರವು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರ ಕುಂದು ಕೊರತೆಗಳನ್ನು ವಿಚಾರಿಸಿ, ಅವುಗಳಿಗೆ ಸೂಕ್ತ ಪರಿಹಾರ ಕಂಡು ಹಿಡಿಯುವ ಸಲುವಾಗಿ ತಾಲ್ಲೂಕು ಜಿಲ್ಲೆ ಮತ್ತು ವಿಭಾಗೀಯ ಮಟ್ಟದ ಸಮಿತಿಗಳನ್ನು ರಚಿಸಿದೆ.

5. ಪರಿಶಿಷ್ಟ ಜಾತಿಪರಿಶಿಷ್ಟ ಪಂಗಡದ ಜನರ ಮೇಲೆ ನಡೆದ ದೊಡ್ಡ ಪ್ರಮಾಣದ ದೌರ್ಜನ್ಯ ಪ್ರಕರಣಗಳ ಕುರಿತು ತನಿಖೆ ನಡೆಸುವ ಬಗ್ಗೆ ಅಪರಾಧಿಗಳಿಗೆ ಶಿಕ್ಷೆ ವಿಧಿಸುವ ವಿಚಾರದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿ ಸೂಕ್ತ ಸಲಹೆ ಸೂಚನೆ ನೀಡಲು ಸರ್ಕಾರ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ.

6. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರ ಮೇಲೆ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಬೇಗ ಇತ್ಯರ್ಥಗೊಳಿಸಲು ಸರ್ಕಾರ ಬೆಳಗಾಂ, ಮೈಸೂರು, ರಾಯಚೂರು, ಕೋಲಾರ, ಗುಲ್ಬರ್ಗಾ, ಬಿಜಾಪುರ ಜಿಲ್ಲೆಗಳಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿದೆ.